ತಾಯಿಯ ತವರೂರು ಆಗಿದ್ದರೂ, ನಾನು ಅಲ್ಲೇ ಹುಟ್ಟಿದ್ದೆಂದು ನಮ್ಮಮ್ಮ ಹೇಳಿದ್ದರೂ ಮುಂದೆ ಆ ಸ್ಥಳ ಮುಳುಗಡೆಯಾಗಿ ಅಲ್ಲಿನ ಸಂಪರ್ಕ ನನಗೆ ಇಲ್ಲವೇ ಇಲ್ಲ ಅನ್ನಬಹದು. ರಾಜಕೀಯ ಅನ್ನುವುದು ಗಂಡಸರ ಕ್ಷೇತ್ರವಾಗಿದ್ದ ಕಾಲದಲ್ಲಿ ಮನೆಯೊಳಗಿನ ಹೆಮ್ಮಕ್ಕಳಿಗೆ ಆ ಕುರಿತು ಆಸಕ್ತಿ, ತಿಳಿವಳಿಕೆ ಇರುತ್ತಿದ್ದುದೇ ಕಮ್ಮಿ. ನಾನು ಚಿಕ್ಕವಳಾಗಿದ್ದಾಗಿನ ಮಾತು. ಆ ಕಾಲದಲ್ಲಿ 'ಉಳುವವನೇ ಹೊಲದೊಡೆಯ' ಎನ್ನುವ ಕುರಿತು ದೊಡ್ಡ ಚರ್ಚೆಯಾಗುತ್ತಿತ್ತು. ಇದರ ಪರಿಣಾಮವಾಗಿ ನಾವು ಒಂದಿಷ್ಟು ಜಮೀನನ್ನು ಕಳೆದುಕೊಳ್ಳಬೇಕಾಗಿ ಬಂದಿದ್ದು ಹೌದೋ, ಅಲ್ಲವೋ ಅನ್ನುವ ಹಾಗೆ ನೆನಪಿದೆ. ನಕ್ಸಲ್ ಚಟುವಟಿಕೆಯ ಕುರಿತಾಗಿಯೂ ನಮ್ಮ ಊರಿನ ಕಡೆ ಹೇಳಿಕೊಳ್ಳುವಂತಾ ಸದ್ದು ಗದ್ದಲವಿಲ್ಲ. ಅದೇನಿದ್ದರೂ ಶೃಂಗೇರಿಯ ಕಡೆ ಹೆಚ್ಚು ಅನ್ನುವುದನ್ನು ಕೇಳಿ ಬಲ್ಲೆ. ಪತ್ರಿಕೆ, ಟೀವಿಯಲ್ಲಿ ಓದಿದ್ದು, ಕೇಳಿದ್ದಷ್ಟಕ್ಕೆ ನನ್ನ ತಿಳಿವಳಿಕೆ ಸೀಮಿತ. ತೀರಾ ಇಲ್ಲ ಅನ್ನದ ಹಾಗೆ ನಮ್ಮೂರಿನ ಸಮೀಪದ ಹಳ್ಳಿಯ ಕೂಲಿ ಕಾರ್ಮಿಕ ಕುಟುಂಬದ ಯುವತಿಯೊಬ್ಬಳು ನಕ್ಸಲರ ಜೊತೆ ಸೇರಿಕೊಂಡ ಕುರಿತು ಕೇಳಿದ್ದುಂಟು. ಇನ್ನು ಪರಿಸರದ ಕುರಿತು ಹೇಳುವುದಾದರೆ ರಕ್ಷಿತಾರಣ್ಯದ ವ್ಯಾಪ್ತಿಗೆ ಸೇರಿಕೊಂಡ ಅರಣ್ಯ ಪ್ರದೇಶದಲ್ಲಿ ದಿನನಿತ್ಯದ ಅಗತ್ಯಕ್ಕೆ ಬೇಕಾದ ಸೊಪ್ಪು, ಸೌದೆಗಳಿಗೂ ಕಟ್ಟು ನಿಟ್ಟಿನ ತಡೆ ಜಾರಿಯಲ್ಲಿರುವುದು ಕೂಡಾ ಇವತ್ತಿನ ವಿದ್ಯಮಾನ. ಹಿಂದೆಲ್ಲಾ ಅಡಿಕೆ ಕೊಯ್ಲಿನ ಕಾಲದಲ್ಲಿ ದೊಡ್ಡ ದೊಡ್ಡ ಕುಂಟೆಗಳು ಉರಿಯುತ್ತಿದ್ದ ಅಡಿಕೆ ಬೇಯಿಸುವ ದೊಡ್ಡ ಒಲೆ ಈಗ ಕಾಣೆಯಾಗಿ ಅಡಿಕೆ ಬೇಯಿಸಲು ಪರ್ಯಾಯ ಇಂಧನದ ವ್ಯವಸ್ಥೆ ಜಾರಿಗೆ ಬಂದಿದೆ. ಬಚ್ಚಲು ಮನೆಯಲ್ಲೂ ಅಷ್ಟೇ, ಸದಾ ದೊಡ್ಡ ಹಂಡೆಯಲ್ಲಿ ತುಂಬಿಕೊಂಡಿರುತ್ತಿದ್ದ ಬಿಸಿ ನೀರು, ಬಚ್ಚಲೊಲೆಯಲ್ಲಿ ಹೊಗೆ ಕಾರುತ್ತಾ ಸಣ್ಣಗೆ ಉರಿಯುತ್ತಲೇ ಇರುತ್ತಿದ್ದ ಕುಂಟೆಗಳು ಈಗ ಜಾಗ ಖಾಲಿ ಮಾಡಿವೆ. ಎಲ್ಲರ ಅಗತ್ಯಕ್ಕೆ ಮಾತ್ರಾ ಅಲ್ಲ, ಅನಗತ್ಯವಾದ್ದಕ್ಕೂ ಧಾರಾಳವಾಗಿ ಬಳಕೆಯಾಗುತ್ತಿದ್ದ ಅರಣ್ಯ ಸಂಪತ್ತಿನ ನಾಶಕ್ಕೆ ಸರ್ಕಾರದಿಂದ ತಡೆಬಂದಿದೆ. ಇಲ್ಲಿ ಇನ್ನೊಂದು ವಿಷಯ ಪ್ರಸ್ತಾಪಿಸಬೇಕು, ಜಾತಿ ವ್ಯವಸ್ಥೆ ಅನ್ನುವುದು ಪ್ರಶ್ನಾತೀತವಾಗಿ ರೂಢಿಯಲ್ಲಿದ್ದ ಕಾಲ ಹಳ್ಳಿಗಳಲ್ಲಿ ಮುಗಿದುಹೋಗಿದೆ. ಅಂಗಳದಲ್ಲಿ ನಿಂತು ಮಾತಾಡುತ್ತಿದ್ದವರು ಜಗುಲಿಯ ಕುರ್ಚಿಯಲ್ಲಿ ಕೂತು ಕಾಫಿ ಕುಡಿಯುವಷ್ಟರ ಮಟ್ಟಿನ ಬದಲಾವಣೆ ಸಾಧ್ಯವಾಗಿದೆ. ಅಂತರ್ಜಾತೀಯ ಮದುವೆಗಳೂ ಕೂಡಾ ನಡೆಯುತ್ತಾ ಮಲೆನಾಡಿನ ಹಳ್ಳಿಗಳು ಮುಕ್ತ ಮನಸ್ಸಿನಿಂದ ಬದಲಾವಣೆಗೆ ತೆರೆದುಕೊಂಡಿರುವುದು ನಾನು ನೋಡಿದ ಸಂಗತಿ. ಇಂತಾ ಕೆಲವು ಪಲ್ಲಟಗಳು ಅಥವಾ ಬದಲಾವಣೆಗಳು ಸಂದರ್ಭಾನುಸಾರ ನನ್ನ ಸಾಹಿತ್ಯದಲ್ಲಿ ಸೇರಿಕೊಂಡಿವೆ.

- **ನೀವು ಕಂಡಂತೆ ಲೇಖಕಿಯರು ಎದುರಿಸುತ್ತಿರುವ ಸವಾಲುಗಳೇನು? ಹೊಸ ಬರಹಗಾರ್ತಿಯರ ಬರವಣಿಗೆಯ ಬಗ್ಗೆ ಏನೆನ್ನಿಸುತ್ತದೆ?**

ಗೃಹಿಣಿಯಾಗಿದ್ದ ಹೆಣ್ಣೊಬ್ಬಳು ಸಾಹಿತ್ಯದಲ್ಲಿ ತೊಡಗಿಸಿಕೊಳ್ಳುತ್ತಿದ್ದ ಕಾಲಕ್ಕಿಂತಾ ಈ ಕಾಲದ ದುಡಿಯುವ ಮಹಿಳೆಗೆ ತನ್ನ ಅನುಭವಗಳನ್ನು ತನ್ನ ಇಷ್ಟದ ಪ್ರಕಾರ ದಾಖಲಿಸಲು ಸಮಯದ ಅಭಾವ ಇರಬಹುದು. ಬೆರಳೆಣಿಕೆಯ ವಾರ, ಮಾಸಪತ್ರಿಕೆಗಳಿದ್ದ ಕಾಲಕ್ಕಿಂತಾ ಪತ್ರಿಕೆಗಳ ಮಹಾಪೂರ ಇರುವ ಈ ಕಾಲದಲ್ಲಿ ಪ್ರಕಟಣೆ ಅನ್ನುವುದು ಸುಲಭಸಾಧ್ಯ. ನಾನು ಗಮನಿಸಿದಂತೆ ಮಹಿಳಾ ಸಾಹಿತ್ಯ ಅನ್ನುವ ಹಣೆಪಟ್ಟಿಯ ಅಗತ್ಯವೇ ಇಲ್ಲದೆ ಇವತ್ತಿನ ಸಾಹಿತ್ಯ